5.
ಖಾಂಡವಕ್ಕೆ ಕಿಡಿ
ಹೊತ್ತಿಸಿದವನ ನೆರಳು
ಕಿಡಿ ಹೊತ್ತ ಮರದ ನೆರಳು

ಮೊಳಕೆ ಹಸಿರೆಲೆ
ಮೂರು ಕಾಲಾಂತರ

ಖಾಂಡವದ ಬೂದಿಯ ನೆನಪಲಿ
ಕಾಡುವ ಕಪ್ಪು ನೆರಳು

6.
ನೀರಿನ ಮೇಲೆ ಬಣ್ಣದ ನೆರಳು
ನೆಲದ ಮೇಲೆ ಕರಿ ನೆರಳು

ನಮ್ಮ ಹಾಗೆ

ಹಗಲಿಗೆ ವೇಷ
ಇರುಳಲಿ ಆವೇಶ

7.
ಊರ ಜಾತ್ರೆಯಲಿ
ಸಾವಿರದ ನೆರಳು ಸಾವಿರದ ಬೆಳಕು

ಕಲ್ಲು ಬಂಡೆಗೆ ಮುತ್ತಿಡುವ ಬಿಸಲು ಕೆಳಗೆ ನೆರಳು
ತೇರ ಕಲಸದ ಮೇಲೆ ಬಿಸಲು ಕೆಳಗೆ ನೆರಳು

ಜಾತ್ರೆ ಮುಗಿದ ಮೇಲೆ
ಎಲೆ ಉದುರಿದ ಮೇಲೆ
ಮೇಲೇನಿದೆ? ಏನಿದೆ?

ಸುಡುವ ಎದೆಯ ಮೇಲೆ
ನೆನಪ ನೆರಳು

